# **ಹಿರಿಯ ದಿವಾಣಿ ನ್ಯಾಯಾಧೀಶರ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ತಿ.ನರಸೀಪುರ.**

**ಸಿಸಿ ಸಂಖ್ಯೆ: 287/2015. ಚಾ.ಸಾ-39. ಪ್ರಾ.ಸಾ-4.**

| | | |
|---|---|---|
| ಹೆಸರು | : | ಗೋಪಿ ಕೃಷ್ಣ ಕೆ ಆರ್ |
| ತಂದೆಯ ಹೆಸರು | : | ಕೆ. ರಾಮಚಂದ್ರ ಹತ್ವಾರ್ |
| ವಯಸ್ಸು | : | 48 |
| ವೃತ್ತಿ | : | ಪೊಲೀಸ್ ನಿರೀಕ್ಷಕರು, ಭಟ್ಕಳ ನಗರ ಪೊಲೀಸು ಠಾಣೆ ಉತ್ತರ ಕನ್ನಡ ಜಿಲ್ಲೆ. |
| ವಾಸ | : | ಭಟ್ಕಳ |

ದಿನಾಂಕಃ 23-06-2023 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ ಮಾನ್ಯ ಎಪಿಪಿ ರವರಿಂದಃ**

ನಾನು ಸೆಪ್ಟೆಂಬರ್ 2012 ರಿಂದ ಫೆಬ್ರವರಿ 2014 ರ ವರೆಗೆ ತಿ. ನರಸೀಪುರ ಪೊಲೀಸು ಠಾಣೆಯ ಕಾನೂನು ಸುವ್ಯವಸ್ಥೆ ವಿಭಾಗದಲ್ಲಿ ಪೊಲೀಸು ಉಪ ನಿರೀಕ್ಷಕನಾಗಿ ಕರ್ತವ್ಯ ನಿರ್ವಹಿಸಿದ್ದೆನು.

ಈ ಪ್ರಕರಣದ ಕಡತವನ್ನು ಮುಂದಿನ ತನಿಖೆಗೆ ಪ್ರಾಸಾ 3 ರವರಿಂದ ಪಡೆದುಕೊಂಡಿದ್ದೆನು.

ನಂತರ ದಿಃ22.11.2012 ರಂದು ಚಾಸಾ 24 ರವರು ಹಾಜರುಪಡಿಸಿದ 1 ರಿಂದ 44 ದಾಖಲೆಗಳನ್ನು ಪಂಚರಾದ ಚಾಸಾ 20 ಮತ್ತು 24 ರ ಸಮಕ್ಷಮ ಬೆಳಗ್ಗೆ 11.00 ರಿಂದ 4.00 ಗಂಟೆಯ ಸಮಯದಲ್ಲಿ ಜಪ್ತು ಪಡಿಸಿ ಪಂಚನಾಮವನ್ನು ಜರುಗಿಸಿರುತ್ತೇನೆ. ಆ ದಾಖಲೆಗಳನ್ನು ನೋಡಿದರೆ ಗುರುತಿಸುತ್ತೇನೆ.

ಸದರಿ ಪಂಚನಾಮ ಮತ್ತು ಅದರಲ್ಲಿರುವ ನನ್ನ ಸಹಿಯನ್ನು ಈಗ ನೋಡಿ ಗುರುತಿಸಿರುತ್ತೇನೆ. ಅವುಗಳನ್ನು ಕ್ರಮವಾಗಿ ನಿ.ಪಿ.8 ಮತ್ತು 8(ಎ) ಎಂದು ಗುರುತಿಸಲಾಯಿತು.

ಸದರಿ ದಾಖಲೆಗಳನ್ನು ಪಿ ಎಫ್ ಸಂಖ್ಯೆ 194/2012 ರಲ್ಲಿ ನಮೂದಿಸಿ ನ್ಯಾಯಾಲಯಕ್ಕೆ ನಿವೇದಿಸಿಕೊಂಡಿರುತ್ತೇನೆ.

ನಂತರ ದಿಃ14.09.2013 ರಂದು 2 ನೇ ಆರೋಪಿತ ಠಾಣೆಗೆ ಬಂದಿದ್ದು ಆತನ ಕೋರಿಕೆ ಕೈ ಬರವಣಿಗೆ ಮತ್ತು ಹಸ್ತಾಕ್ಷರಗಳನ್ನು ಪಂಚನಾಮದ ಮೂಲಕ ಪಂಚರಾದ ಚಾಸಾ 29 ಮತ್ತು 30 ರವರ ಸಮಕ್ಷಮ ಪಡೆದುಕೊಂಡಿರುತ್ತೇನೆ.

ಸದರಿ ಪಂಚನಾಮ ಮತ್ತು ಆ ಬರವಣಿಗೆ ಹಾಗೂ ಹಸ್ತಾಕ್ಷರಗಳು ಮತ್ತು ಅದರಲ್ಲಿರುವ ನನ್ನ ಒಟ್ಟು 10 ಸಹಿಗಳನ್ನು ಈಗ ನೋಡಿ ಗುರುತಿಸಿರುತ್ತೇನೆ. ಅವುಗಳನ್ನು ಕ್ರಮವಾಗಿ ನಿ.ಪಿ.9 ಮತ್ತು 9(ಎ) ಎಂದು ಗುರುತಿಸಲಾಯಿತು.

ಸದರಿ ದಾಖಲೆಗಳನ್ನು ಪಿ ಎಫ್ ಸಂಖ್ಯೆ 172/2013 ರಲ್ಲಿ ನಮೂದಿಸಿ ನ್ಯಾಯಾಲಯಕ್ಕೆ ನಿವೇದಿಸಿಕೊಂಡಿರುತ್ತೇನೆ.

ನಂತರ ದಿಃ18.11.2013 ರಂದು ದೂರುದಾರರು ಠಾಣೆಗೆ ಬಂದಿದ್ದು ಆತನ ಕೋರಿಕೆ ಕೈ ಬರವಣಿಗೆ ಮತ್ತು ಹಸ್ತಾಕ್ಷರಗಳನ್ನು ಪಂಚನಾಮದ ಮೂಲಕ ಪಂಚರಾದ ಚಾಸಾ 24 ರವರ ಸಮಕ್ಷಮ ಪಡೆದುಕೊಂಡಿರುತ್ತೇನೆ.

ಸದರಿ ಪಂಚನಾಮ ಮತ್ತು ಆ ಬರವಣಿಗೆ ಹಾಗೂ ಹಸ್ತಾಕ್ಷರಗಳು ಮತ್ತು ಅದರಲ್ಲಿರುವ ನನ್ನ ಒಟ್ಟು 12 ಸಹಿಗಳನ್ನು ಈಗ ನೋಡಿ ಗುರುತಿಸಿರುತ್ತೇನೆ. ಅವುಗಳನ್ನು ಕ್ರಮವಾಗಿ ನಿ.ಪಿ.10 ಮತ್ತು 10(ಎ) ಎಂದು ಗುರುತಿಸಲಾಯಿತು.

ಸದರಿ ದಾಖಲೆಗಳನ್ನು ಪಿ ಎಫ್ ಸಂಖ್ಯೆ 208/2013 ರಲ್ಲಿ ನಮೂದಿಸಿ ನ್ಯಾಯಾಲಯಕ್ಕೆ ನಿವೇದಿಸಿಕೊಂಡಿರುತ್ತೇನೆ.

ನಂತರ ದಿಃ03.12.2013 ರಂದು ಚಾಸಾ 26 ರವರು ಠಾಣೆಗೆ ಬಂದು 4 ಚೆಕುಗಳನ್ನು ಹಾಜುರಪಡಿಸಿದ್ದು, ಅವುಗಳನ್ನು ಜಪ್ತು ಪಡಿಸಿ ಚಾಸಾ 26 ಮತ್ತು 27 ರವರ ಸಮಕ್ಷಮ ಬೆಳಗ್ಗೆ 10.30 ರಿಂದ 11.15 ರ ಗಂಟೆ ಸಮಯದಲ್ಲಿ ಪಂಚನಾಮವನ್ನು ಜರುಗಿಸಿರುತ್ತೇನೆ. ಆ ಚೆಕ್ ಗಳ ಹಿಂಬದಿಯಲ್ಲಿ 2 ನೇ ಆರೋಪಿತನ ಸಹಿಗಳಿರುತ್ತವೆ.

ಸದರಿ ಪಂಚನಾಮ ಮತ್ತು ಅದರಲ್ಲಿರುವ ನನ್ನ ಸಹಿಯನ್ನು ಈಗ ನೋಡಿ ಗುರುತಿಸಿರುತ್ತೇನೆ. ಅವುಗಳನ್ನು ಕ್ರಮವಾಗಿ ನಿ.ಪಿ.11 ಮತ್ತು 11(ಎ) ಎಂದು ಗುರುತಿಸಲಾಯಿತು.

ಸದರಿ 4 ಚೆಕುಗಳನ್ನು ಈಗ ನೋಡಿ ಗುರುತಿಸಿರುತ್ತೇನೆ ಅವುಗಳನ್ನು ಕ್ರಮವಾಗಿ ನಿ.ಪಿ.12 ರಿಂದ 15 ಎಂದು ಗುರುತಿಸಲಾಯಿತು.

ಸದರಿ ದಾಖಲೆಗಳನ್ನು ಪಿ ಎಫ್ ಸಂಖ್ಯೆ 222/2013 ರಲ್ಲಿ ನಮೂದಿಸಿ ನ್ಯಾಯಾಲಯಕ್ಕೆ ನಿವೇದಿಸಿಕೊಂಡಿರುತ್ತೇನೆ.



ಅದೇ ದಿನ ಚಾಸಾ 24 ರವರು ಠಾಣೆಗೆ ಬಂದು 1 ರಿಂದ 8 ದಾಖಲೆಗಳನ್ನು ಹಾಜುರಪಡಿಸಿದ್ದು, ಅವುಗಳನ್ನು ಜಪ್ತು ಪಡಿಸಿ ಚಾಸಾ 24 ಮತ್ತು 28 ರವರ ಸಮಕ್ಷಮ ಬೆಳಗ್ಗೆ 11.30 ರಿಂದ 12.30 ರ

ಗಂಟೆ ಸಮಯದಲ್ಲಿ ಪಂಚನಾಮವನ್ನು ಜರುಗಿಸಿರುತ್ತೇನೆ. ಸದರಿ ದಾಖಲೆಗಳನ್ನು ನೋಡಿದರೆ ಗುರುತಿಸುತ್ತೇನೆ.

ಸದರಿ ಪಂಚನಾಮ ಮತ್ತು ಅದರಲ್ಲಿರುವ ನನ್ನ ಸಹಿಯನ್ನು ಈಗ ನೋಡಿ ಗುರುತಿಸಿರುತ್ತೇನೆ. ಅವುಗಳನ್ನು ಕ್ರಮವಾಗಿ ನಿ.ಪಿ.16 ಮತ್ತು 16(ಎ) ಎಂದು ಗುರುತಿಸಲಾಯಿತು.

ಸದರಿ ದಾಖಲೆಗಳನ್ನು ಪಿ ಎಫ್ ಸಂಖ್ಯೆ 223/2013 ರಲ್ಲಿ ನಮೂದಿಸಿ ನ್ಯಾಯಾಲಯಕ್ಕೆ ನಿವೇದಿಸಿಕೊಂಡಿರುತ್ತೇನೆ.

ಈ ಮೇಲೆ ಹೇಳಿದ ಜಪ್ತು ಪಡಿಸಿಕೊಂಡ ದಾಖಲೆಗಳನ್ನು ರಾಸಾಯನಿಕ ಪರೀಕ್ಷಾ ಕೇಂದ್ರಕ್ಕೆ ಕೈ ಬೆರಳು ತಜ್ಞರ ಅಭಿಪ್ರಾಯ ಪಡೆಯಲು ಅದೇ ದಿನ ಚಾಸಾ 31 ಮತ್ತು 32 ರ ಸಮಕ್ಷಮ ದಾಖಲಾತಿಗಳ ಕ್ರಮಾಂಕ ಮಹಜರ್ ನ್ನು ಮಧ್ಯಾಹ್ನ 1 ರಿಂದ 3 ಗಂಟೆ ಸಮಯದಲ್ಲಿ ಸಿದ್ದಪಡಿಸಿರುತ್ತೇನೆ.

ಅದನ್ನು ಮತ್ತು ಅದರಲ್ಲಿರುವ ನನ್ನ ಸಹಿಯನ್ನು ಈಗ ನೋಡಿ ಗುರುತಿಸಿರುತ್ತೇನೆ. ಅವುಗಳನ್ನು ಕ್ರಮವಾಗಿ ನಿ.ಪಿ.17 ಮತ್ತು 17(ಎ) ಎಂದು ಗುರುತಿಸಲಾಯಿತು.

ನಂತರ ಸಂಬಂದಪಟ್ಟ ಎಲ್ಲಾ ದಾಖಲೆಗಳನ್ನು ಸದರಿ ಕೇಂದ್ರಕ್ಕೆ ಕಳುಹಿಸಲಾಯಿತು.

5

ನಂತರ ನಾನು ಪ್ರಕರಣದ ಕಡತವನ್ನು ಮುಂದಿನ ತನಿಖೆಗೆ ಪ್ರಾಸಾ 2 ರವರಿಗೆ ಹಸ್ತಾಂತರಿಸಿರುತ್ತೇನೆ.

2 ನೇ ಆರೋಪಿತನನ್ನು ನೋಡಿದರೆ ಗುರುತಿಸುತ್ತೇನೆ.

**ಮರು ವಿಚಾರಣೆ ಇರುವುದಿಲ್ಲ.**

(ತೆ ನ್ಯಾದಲ್ಲಿ ಬೆರಳಚ್ಚುಗೊಳಿಸಲಾಯಿತು)
ಓ ಹೇ ಕೇ ಸರಿ ಅದೆ

**ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು**
**ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿ,**
**ತಿ.ನರಸೀಪುರ.**